**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಸೀಕೆರೆ.**

***ಸಿ.ಸಿ.ನಂಬರ್.2184/16***

| | | |
|---|---|---|
| ಪಿರ್‍ಯಾದಿದಾರರು | : | ಸಿದ್ದೇಶ್‌ನಾಯ್ಕ ಬಿನ್ ಗೋಪಾಲನಾಯ್ಕ,<br>28 ವರ್ಷ, ವಾಸ : ಮುರುಂಡಿ ಬಿ ತಾಂಡ್ಯ ಗ್ರಾಮ,<br>ಅರಸೀಕೆರೆ ತಾಲ್ಲೂಕು. |
| | | **ವಿರುದ್ದ** |
| ಆರೋಪಿ | : | ಕೃಷ್ಣಕುಮಾರ್ ಅಲಿಯಾಸ್ ಕೆ.ಕೆ. ನಾಯ್ಕ<br>ಬಿನ್ ವಿಜಯ್‌ಕುಮಾರ್, 39 ವರ್ಷ,<br>ಡೋರ್ ನಂ.284-285, 1ನೇ ಬಿ ಅಡ್ಡರಸ್ತೆ,<br>2ನೇ ಹಂತ, ರೇಮ್ಕಾ ಲೇಔಟ್, ಹಂಪಿನಗರ,<br>ಬೆಂಗಳೂರು – 560040. |

**ಆಪಾದನೆ**

ಶ್ರೀ ಸಂದೇಶ್ ಪ್ರಭು ಬಿ, ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು ಈ ಕೆಳಗಿನ ಆಪಾದನೆಯನ್ನು ನಿಮ್ಮ ಮೇಲೆ ಹೊರಿಸುವುದೇನೆಂದರೆ,

ಆರೋಪಿಯಾದ ನೀವು ಪಿರ್‍ಯಾದಿದಾರರಿಗೆ ಬಹಳ ಪರಿಚಯಸ್ಥರಾಗಿದ್ದು ದಿನಾಂಕ 10.05.2015 ರಂದು ಪಿರ್‍ಯಾದಿದಾರರನ್ನು ಸಂಪರ್ಕಿಸಿ ನಿಮ್ಮ ಗೃಹಕೃತ್ಯದ ಅಡಚಣೆಗಾಗಿ ರೂ.2,00,000-00 ಗಳನ್ನು ನಗದು ರೂಪದಲ್ಲಿ ಕೈಗಡ ಸಾಲವಾಗಿ ಪಡೆದುಕೊಂಡಿದ್ದು, ಸದರೀ ಸಾಲದ ಹಣವನ್ನು ಮೂರು ತಿಂಗಳುಗಳೊಳಗಾಗಿ ಮರುಪಾವತಿಸುವುದಾಗಿ ಹೇಳಿ, ಮರುಪಾವತಿಸದೇ ಇದ್ದಾಗ ಪಿರ್‍ಯಾದಿದಾರರು ಆರೋಪಿಯಾದ ನಿಮ್ಮನ್ನು ಹಣವನ್ನು ಕೇಳಿದಾಗ ನೀವು ಕರ್ನಾಟಕ ಕೋ ಒಪ್ ಅಪೆಕ್ಸ್ ಬ್ಯಾಂಕ್ ಲಿ, ಬೆಂಗಳೂರಿನ ರಾಜಾಜಿನಗರದ ಶಾಖೆಯ ಚೆಕ್ ನಂ.197936 ನ್ನು ರೂ.2,00,000-00 ಗಳಿಗೆ ದಿನಾಂಕ : 14-08-2015 ರಂದು ನೀಡಿದ್ದು ಸದರೀ ಚೆಕ್‌ನ್ನು ಪಿರ್‍ಯಾದಿದಾರರು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಖಾತೆ ಹೊಂದಿರುವ

ಕೆನರಾ ಬ್ಯಾಂಕ್, ಗೀಜಿಹಳ್ಳಿ ಶಾಖೆಗೆ ದಿನಾಂಕ : 19-08-2015 ರಂದು ಹಾಜರು ಮಾಡಿದಾಗ ಬ್ಯಾಂಕಿನವರು ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಷರಾದೊಂದಿಗೆ ಸದರೀ ಚೆಕ್‌ನ್ನು ದಿನಾಂಕ : 25-08-2015 ರಂದು ವಾಪಸ್ಸು ಮಾಡಿದ್ದು, ಸದರೀ ವಿಚಾರವನ್ನು ಪಿರ್ಯಾದಿದಾರರು ನಿಮಗೆ ತಿಳಿಸಿದರೂ ನೀವು ಯಾವುದೇ ಉತ್ತರವನ್ನು ನೀಡದೇ ಇದ್ದುದರಿಂದ ಪಿರ್ಯಾದಿದಾರು ನಿಮಗೆ ತಮ್ಮ ವಕೀಲರ ನೋಟೀಸ್ ದಿನಾಂಕ : 14-09-2015ರ ಮೂಲಕ ತಿಳಿಸಿದರೂ ಸಹ ಸದರೀ ನೋಟೀಸ್‌ಗೆ ಯಾವುದೇ ಉತ್ತರವನ್ನಾಗಲೀ ಅಥವಾ ಹಣವನ್ನಾಗಲೀ ನೀಡದೇ ಮೋಸ ಮಾಡಿರುವಿರಿ. ಆದ್ದರಿಂದ ನೀವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಆ್ಯಕ್ಟ್ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಈ ಮೇಲ್ಕಂಡ ಎಲ್ಲಾ ಅಪರಾಧಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.

ಪ್ರಶ್ನೆ : ಮೇಲ್ಕಂಡ ಆಪಾದನೆಯನ್ನು ಅರ್ಥ ಮಾಡಿಕೊಂಡಿರಾ?
ಉತ್ತರ :

ಪ್ರಶ್ನೆ : ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರಾ?
ಉತ್ತರ :

ಪ್ರಶ್ನೆ : ಮೇಲ್ಕಂಡ ಆಪಾದನೆಯ ವಿಚಾರಣೆ ಆಗಬೇಕೆ?
ಉತ್ತರ :

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಢೀಕರಿಸಿದೆ)

ದಿನಾಂಕ: 30-01-2018

(ಸಂದೇಶ್ ಪ್ರಭು ಬಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಸೀಕೆರೆ.